ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅವರ ಪ್ರಶ್ನೆಯ ಉದ್ದೇಶ ಬೇರೆ. ಅವರು ರೂರಲ್ ಡೆವಲೆಪ್‌ಮೆಂಟ್ ಮಿನಿಸ್ಟರ್ ಅನಾನ್ಸ್ ಮಾಡಿದಂಥ ಜಲಸಂರಕ್ಷಣೆ ಯೋಜನೆ, ಏನು ಮಧ್ಯಪ್ರದೇಶದಲ್ಲಿ ಜಾರಿಯಲ್ಲಿದೆ, ಆ ಮಾದರಿಯಲ್ಲಿ ಕರ್ನಾಟಕದಲ್ಲಿ ಕೂಡ ಮಾಡುತ್ತೀರೋ ಹೇಗೋ ಎಂದು ಕೇಳಿದಂಥ ಪ್ರಶ್ನೆ. ಆದರೆ ನಮ್ಮ ಕಡೆ ಆ ಪ್ರಶ್ನೆ ವರ್ಗ ಮಾಡಿದ್ದಕ್ಕೆ ಅದನ್ನು ನಮ್ಮಲ್ಲಿ ಅರ್ಥ ಮಾಡಿಕೊಂಡು ಜಲಸಂವರ್ಧನೆ ಯೋಜನೆ ಎಂದು ತಿಳಿದುಕೊಂಡು ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಆ ಮಧ್ಯಪ್ರದೇಶದ ಮಾದರಿಯಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಮಾಡತಕ್ಕಂಥ ಜಲಸಂರಕ್ಷಣೆ ಯೋಜನೆ ಏನು ಇದೆ, ಇದಕ್ಕೆ ಮಾನ್ಯ ಘೋರ್ಪಡೆಯವರು ಒಂದು ಯೋಜನೆಯನ್ನು ತಯಾರು ಮಾಡುತ್ತಿದ್ದಾರೆ; ಅದಕ್ಕಾಗಿ ದಯಮಾಡಿ ಇದನ್ನು ರೂರಲ್ ಡೆವಲೆಪ್‌ಮೆಂಟ್ ಇಲಾಖೆಗೆ ಈ ಪ್ರಶ್ನೆಯನ್ನು ಟ್ರಾನ್ಸ್‌ಫರ್ ಮಾಡಿದರೆ ಅಲ್ಲಿ ಅವರಿಗೆ ಸೂಕ್ತವಾದಂಥ ಉತ್ತರ ಸಿಗುತ್ತದೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ: ಸಚಿವರು ಹೇಳತಕ್ಕಂಥ ಉತ್ತರ ಸರಿಯಿದೆ. ಆದರೆ ನಮಗೆ ಬಂದಿರತಕ್ಕಂಥ ಉತ್ತರ ತಪ್ಪಾಗಿರುವುದರಿಂದ ನಾನು ಕೇಳಬೇಕಾಗುತ್ತದೆ.

ಅಧ್ಯಕ್ಷರು: ಅದು ಆ ಡಿಪಾರ್ಟ್‌ಮೆಂಟಿಗೆ ಪ್ರಶ್ನೆ ಇರುವುದು, ಅದಕ್ಕೆ ನನಗೆ ಸಂಬಂಧವಿಲ್ಲ, ಅದನ್ನು ಆ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಮಾಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ: ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದಕ್ಕೆ ಉತ್ತರ ಹೇಳಬೇಕಾಗುತ್ತದೆ.

ಅಧ್ಯಕ್ಷರು: ಅವರು ಇಲ್ಲಿ ಇಲ್ಲವಲ್ಲಾ, ಟ್ರಾನ್ಸ್‌ಫರ್ ಮಾಡಿ ಇನ್ನೊಂದು ದಿವಸ ತೆಗೆದುಕೊಂಡರಾಯಿತು ಬಿಡಿ.

ಕಾವೇರಿ ನದಿ ಜಲಾಶಯದಿಂದ ತಮಿಳುನಾಡಿಗೆ ಬಿಟ್ಟಿರುವ ನೀರಿನ ಪ್ರಮಾಣ

58(257) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಕಾವೇರಿ ನದಿ ಜಲಾಶಯಗಳಿಂದ ತಮಿಳುನಾಡಿಗೆ ಬಿಟ್ಟಿರುವ ನೀರಿನ ಪ್ರಮಾಣ ಎಷ್ಟು? (ವರ್ಷವಾರು ವಿವರಗಳನ್ನು ಕೊಡುವುದು)

ಆ) ಈ ಪ್ರಮಾಣವು ಒಪ್ಪಂದಗಳ ಮಿತಿಯೊಳಗೆ ಇದೆಯೇ ಅಥವಾ ಮೀರಿದೆಯೇ? ಮೀರಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಪ್ರಸಕ್ತ ವರ್ಷದಲ್ಲಿ ಕೃಷ್ಣರಾಜಸಾಗರ (ಕೆ.ಆರ್.ಎಸ್.) ಜಲಾಶಯದ ನೀರಿನ ಪ್ರಮಾಣ ಇಲ್ಲಿನ ಅಚ್ಚುಕಟ್ಟುಗಳಿಗೆ ಸಾಕಾಗುತ್ತದೆಯೇ? ವಿವರ ನೀಡುವುದು.

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಕಾವೇರಿ ನದಿ ಜಲಾಶಯಗಳಿಂದ ತಮಿಳುನಾಡಿಗೆ ಹರಿದಿರುವ ನೀರಿನ ಪ್ರಮಾಣ ಹಾಗೂ ಕೇಂದ್ರ ಜಲ ಆಯೋಗದ ಬಿಳಿಗುಂಡ್ಲುವಿನ ಜಲ ಮಾಪನ ಕೇಂದ್ರದ ಮಾಹಿತಿಯಂತೆ ಹರಿದಿರುವ ನೀರಿನ ಪ್ರಮಾಣ ಕೆಳಕಂಡಂತಿದೆ:

1	2	3
ವರ್ಷ	ಕೃಷ್ಣರಾಜಸಾಗರ ಮತ್ತು ಕಬಿನಿ ಜಲಾಶಯಗಳಿಂದ ನದಿಗೆ ಬಿಟ್ಟಿರುವ ನೀರಿನ ಪ್ರಮಾಣ (ಟಿಎಂಸಿ)	ಬಿಳಿಗುಂಡ್ಲುವಿನಲ್ಲಿ ತಮಿಳುನಾಡಿಗೆ ಹರಿದಿರುವ ನೀರಿನ ಪ್ರಮಾಣ (ಟಿಎಂಸಿ)
1999-2000	131.94	273.18
2000-2001	138.27	316.89
2001-2002	89.45	189.94

ಆ) ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ಆದೇಶದ ಪ್ರಕಾರ ಪ್ರತಿ ವರ್ಷ 205 ಟಿಎಂಸಿ ಅಡಿಗಳಷ್ಟು ನೀರನ್ನು ತಮಿಳುನಾಡಿನ ಮೆಟ್ಟೂರು ಜಲಾಶಯಕ್ಕೆ ಖಾತರಿ ಪಡಿಸಬೇಕಾಗಿದೆ. 1999-2000 ಮತ್ತು 2000-2001ರಲ್ಲಿ ತಮಿಳುನಾಡಿಗೆ 205 ಟಿಎಂಸಿ ಗಿಂತ ಹೆಚ್ಚು ನೀರು ಹರಿದಿದೆ.

ಇ) ಈವರೆಗೆ ಮುಂಗಾರು ದುರ್ಬಲವಾಗಿದ್ದು, ಜಲಾಶಯದಲ್ಲಿ ನೀರಿನ ಸಂಗ್ರಹಣೆ ಕಡಿಮೆಯಿದೆ. 10.7.2002 ರಂದು ಜಲಾಶಯದಲ್ಲಿ ಒಟ್ಟು 8.56 ಟಿಎಂಸಿ ನೀರು ಸಂಗ್ರಹವಾಗಿದೆ. ಬರುವ ದಿನಗಳಲ್ಲಿ ಪರಿಸ್ಥಿತಿ ಉತ್ತಮಗೊಳ್ಳುವ ನಿರೀಕ್ಷೆಯಿದ್ದು, ಆಗಸ್ಟ್ ತಿಂಗಳ ಮೊದಲ ಭಾಗದಲ್ಲಿ ಈ ಬಗ್ಗೆ ವಿವರ ನೀಡಲು ಸಾಧ್ಯವಾಗುತ್ತದೆ.

ಶ್ರೀ ಪಿ.ಜಿ. ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಇದೊಂದು ಬಹಳ ಮುಖ್ಯವಾದ ಪ್ರಶ್ನೆ. ಸರ್ಕಾರ ಕೊಟ್ಟ ಉತ್ತರದಂತೆ 1999-2000 ನೇ ಸಾಲಿನಲ್ಲಿ 68 ಟಿಎಂಸಿ ಹೆಚ್ಚು ನೀರನ್ನು ತಮಿಳುನಾಡಿಗೆ ಬಿಟ್ಟಿದ್ದೇವೆ. 2000-2001ನೇ ಸಾಲಿನಲ್ಲಿ 111 ಟಿಎಂಸಿ ನೀರನ್ನು ಹೆಚ್ಚಾಗಿ ತಮಿಳುನಾಡಿಗೆ ಬಿಟ್ಟಿದ್ದೇವೆ. 2001-2002ನೇ ಸಾಲಿನಲ್ಲಿ ಕಡಿಮೆಯಾಗಿರುವಂಥದ್ದು ಕೇವಲ 15 ಟಿಎಂಸಿ ನೀರು ಮಾತ್ರ. ಈ ವರ್ಷವಂತೂ ನಾವು ಬಹಳ ಕಷ್ಟದ ಸ್ಥಿತಿಯಲ್ಲಿದ್ದೇವೆ. ಮಾನ್ಯ ಮಂತ್ರಿಗಳು ನೀರನ್ನು ಬಿಟ್ಟಿಲ್ಲವೆಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಸದನಕ್ಕೆ ಹೇಳುವುದರ ಮೂಲಕ ತಪ್ಪು ದಾರಿಗೆ ಎಳೆದಿದ್ದಾರೆ. ನಾನು ಏನು ಹೇಳುತ್ತೇನೆಂದರೆ, ಇವತ್ತು ಬಿಳಿಗುಂಡ್ಲುನಲ್ಲಿ ಬಿಟ್ಟಿರತಕ್ಕಂಥ ನೀರು ಏನು ಇದೆ ಅದು ಖಂಡಿತವಾಗಿಯೂ ಸಹ ಹೆಚ್ಚಿನ ನೀರನ್ನು ಬಿಟ್ಟಿದ್ದಾರೆ. ಕಬಿನಿ ಜಲಾಶಯದಿಂದ ನೀರನ್ನು ಬಿಟ್ಟಿರುವುದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲವೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ನಾನು ತಮ್ಮನ್ನು ಏನು ಕೇಳುತ್ತೇನೆಂದರೆ, ನಿನ್ನೆ ದಿನ ಸುಪ್ರೀಂ ಕೋರ್ಟಿಗೆ ತಮಿಳುನಾಡಿನವರು ಹೋಗಿದ್ದಾರೆ, ಸುಪ್ರೀಂ ಕೋರ್ಟ್‌ನವರು ಏನು ಹೇಳಿದ್ದಾರೆ ಎಂದರೆ, 1) ಕಾವೇರಿ ನ್ಯಾಯ ಮಂಡಳಿಯ ಮಧ್ಯಂತರ ಆದೇಶವನ್ನು ಅನುಷ್ಠಾನಕ್ಕೆ ತರಲು ಕಾವೇರಿ ಪ್ರಾಧಿಕಾರ ವಿಫಲವಾಗಿದೆ ಎಂದು ಘೋಷಣೆ ಮಾಡಬೇಕು (2) ಈ ಪ್ರಾಧಿಕಾರದ ರಚನೆ ಏನಿದೆ, ನ್ಯಾಯ ಮಂಡಳಿ ಆದನಂತರ ಆಗಿರತಕ್ಕಂಥ

ಆದೇಶವನ್ನು ಮತ್ತು ಕಾವೇರಿ ಜಲ ಯೋಜನೆಯನ್ನು ರದ್ದು ಮಾಡಬೇಕೆಂಬ ಮಾತನ್ನು ಹೇಳಿದ್ದಾರೆ. ಹಾಗೆಯೇ ಇದು ನಿಷ್ಪ್ರಯೋಜಕ ಎನ್ನತಕ್ಕಂಥ ಮಾತನ್ನು ಸುಪ್ರೀಂ ಕೋರ್ಟ್ ಮುಂದೆ ಹೇಳಿದ್ದಾರೆ. (3) ಹಿಂದೆ ಆಗಿರತಕ್ಕಂಥ ಎಲ್ಲಾ ನೀರನ್ನು ಸಹಿತ ತುಂಬಿಕೊಡುವುದಕ್ಕೆ ಕರ್ನಾಟಕ ರಾಜ್ಯಕ್ಕೆ ನಿರ್ದೇಶನ ಕೊಡಬೇಕೆಂದು ಕೇಳಿದ್ದಾರೆ(4) ಕಾವೇರಿ ನ್ಯಾಯ ಮಂಡಳಿಯ ಮಧ್ಯಂತರ ಆದೇಶವನ್ನು ಸರಿಯಾದ ರೂಪದಲ್ಲಿ ಅನುಷ್ಠಾನಗೊಳಿಸಲು ಹೊಸ ಯೋಜನೆಯಲ್ಲಿ ಹೆಚ್ಚುವರಿ ಯೋಜನೆಯನ್ನು ರೂಪಿಸಬೇಕು ಎನ್ನತಕ್ಕಂಥ ಮಾತನ್ನು ಸಹ ಹೇಳಿದ್ದಾರೆ. ಕೊನೆಯದಾಗಿ, ಅವರು ಕೇಳಿರತಕ್ಕಂಥದ್ದು ಏನೆಂದರೆ, ಮಧ್ಯಂತರ ಆದೇಶವನ್ನು ಕರ್ನಾಟಕ ರಾಜ್ಯ ಕಟ್ಟುನಿಟ್ಟಾಗಿ ಪಾಲಿಸುವಂಥ ಸಂದರ್ಭದಲ್ಲಿ, ರಾಜ್ಯದ ವ್ಯಾಪ್ತಿಯಲ್ಲಿ ಬರುವ ಕಾವೇರಿ ಜಲಾಯನ ಪ್ರದೇಶದಲ್ಲಿರುವ ಜಲಾಶಯಗಳನ್ನು ನಿಯಂತ್ರಣ ಮತ್ತು ಉಸ್ತುವಾರಿಗಾಗಿ ತಾಂತ್ರಿಕ ಅಧಿಕಾರಿಗಳ ಸಮಿತಿಯನ್ನು ನೇಮಕ ಮಾಡಿ ಮಧ್ಯಂತರ ಆದೇಶ ನೀಡಬೇಕೆಂದು ತಮಿಳುನಾಡು ರಾಜ್ಯ ದಾವೆ ಹೂಡಿದೆ. ನಾನು ಈ ಸಂದರ್ಭದಲ್ಲಿ ಸರ್ಕಾರದವರಲ್ಲಿ ಕೇಳುವುದೇನೆಂದರೆ, ತಮಿಳುನಾಡು ಹೂಡಿರತಕ್ಕಂಥ ದಾವೆಗೆ ಸಂಬಂಧಪಟ್ಟಂತೆ ಸರ್ಕಾರದ ನಿಲುವು ಏನು? ಇದನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕು. ಈ ವಿಷಯಕ್ಕೆ ಸಂಬಂಧಪಟ್ಟಂಥ ಪ್ರಶ್ನೆಯನ್ನು ನಾನು ಬೇರೆ ಸಂದರ್ಭದಲ್ಲಿ ಕೇಳಬೇಕೆಂದು ಇದ್ದೆ. ಆದರೆ, ಪ್ರಶ್ನೋತ್ತರ ವೇಳೆಯಲ್ಲಿ ಈ ವಿಷಯ ಇದ್ದುದರಿಂದ, ಈ ವಿಷಯವನ್ನು ಕೇಳುತ್ತಿದ್ದೇನೆ. ಇದು ರಾಜ್ಯದ ಬಹಳ ಪ್ರಮುಖವಾಗಿರತಕ್ಕಂಥ ಪ್ರಶ್ನೆಯಾಗಿದೆ. ಇವತ್ತಿನದಿವಸ ಕುಡಿಯುವ ನೀರಿಗೆ ಸಾಕಷ್ಟು ತೊಂದರೆ ಇದೆ. ಇನ್ನು ಐದಾರು ದಿವಸಗಳಲ್ಲಿ ಮಳೆ ಆಗದೇ ಇದ್ದರೆ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗೆ ಬಹಳಷ್ಟು ತೊಂದರೆಯಾಗಬಹುದು. ಇವತ್ತಿನದಿವಸ ಕೆ.ಆರ್.ಎಸ್. ಜಲಾಶಯ ಬರಿದಾಗಿದೆ. ಹಾಗೆಯೇ ಹೇಮಾವತಿ ಜಲಾಶಯದಲ್ಲಿಯೂ ಕೂಡ ನೀರಿಲ್ಲ. ಆದ್ದರಿಂದ, ಯಾವ ಕಾರಣಗಳಿಂದ ತಮಿಳುನಾಡಿಗೆ ನೀರು ಬಿಟ್ಟಿದ್ದೀರಿ? This is the right time to say to the Government of India; ಇವತ್ತಿನದಿವಸ ನಮ್ಮ ರಾಜ್ಯದ ಬಗ್ಗೆ ದೆಹಲಿಯಲ್ಲಿ ಲಾಬಿ ನಡೆಯುತ್ತಿದೆ. ಪ್ರತಿಸಾರಿಯೂ ಸಹ ಕರ್ನಾಟಕದವರೇ ತಪ್ಪಿತಸ್ಥರೆಂದು ತೋರಿಸಿಕೊಂಡು ಬಂದಿದ್ದಾರೆ. ನಮಗೆ ನೀರು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ನೀರು ಬಿಡತಕ್ಕಂಥ ಪ್ರಶ್ನೆ ಬರುತ್ತದೆಯೆ? ಅವರ ದಾವೆಗೆ ಸರ್ಕಾರದ ನಿಲುವು ಏನೆಂಬುದನ್ನು ಸ್ಪಷ್ಟಪಡಿಸಬೇಕು. ಇಷ್ಟು ಹೊತ್ತಿಗಾಗಲೇ ವಿರೋಧಪಕ್ಷದ ನಾಯಕರನ್ನು ಕರೆಸಿ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಏನು ಮಾಡಬೇಕೆಂದು ಕೇಳಬಹುದಾಗಿತ್ತು. ಆದರೆ, ಇದರಲ್ಲಿ ನೀವು ವಿಫಲರಾಗಿದ್ದೀರಿ. ಏಕೆಂದರೆ, ನಿಮ್ಮ ಚಟುವಟಿಕೆಗಳೆಲ್ಲಾ ಬೇರೆ ಕಡೆಗೆ ಹೋಗಿದೆ.

ಅಧ್ಯಕ್ಷರು: ಆ ವಿಷಯ ಬೇಡ. ಕಾವೇರಿ ವಾಟರ್ ಬಗ್ಗೆ ಕೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಏಕೆ ಬೇಡ? ಇದು ಬಹಳ ಮುಖ್ಯವಾದ ವಿಷಯವಾಗಿದೆ. ನನ್ನ ಅಭಿಪ್ರಾಯವನ್ನು ನಾನು ಹೇಳಲೇಬೇಕು. ತಾವು ಹೇಳುವುದಕ್ಕೆ ನಾನು ಒಪ್ಪಿಕೊಳ್ಳುವುದಿಲ್ಲ. ಅವರು ಇಷ್ಟು ಹೊತ್ತಿಗೆ ನಮ್ಮನ್ನು ಕರೆಸಿ ಚರ್ಚೆ ಮಾಡಬೇಕಾಗಿತ್ತು. ಬೇರೆ ಬೇರೆ ವಿಷಯಕ್ಕೆ ಕರೆಯುತ್ತಾರೆ, ಈ ವಿಷಯದ ಬಗ್ಗೆ ಏಕೆ ಕರೆದಿಲ್ಲ? ಇವರ ಟ್ರೆಜರಿ ಖಾಲಿಯಾಗಿ ಬರಗಾಲ ಪರಿಸ್ಥಿತಿಯಿಂದ ಜನರು ಸಾಯುತ್ತಿದ್ದಾರೆ, ಹಣ ಬಿಡುಗಡೆ ಮಾಡಿ ಎಂದು ಹೇಳಿದರೆ, ಆಲ್ ಪಾರ್ಟಿ ಕಮಿಟಿ ಮಾನಿಟರಿಂಗ್ ಮಾಡುತ್ತದೆ ಎಂದು ಹೇಳುತ್ತೀರಿ. ನಾನು, ಮಾನ್ಯ ಚೆನ್ನಿಗಪ್ಪ

ಮತ್ತು ಮಾನ್ಯ ಬೈರೇಗೌಡ ಹಾಗೂ ಮಾನ್ಯ ಜಗದೀಶ್ ಶೆಟ್ಟರ್ ರವರು ಚೆಕ್‌ಗೆ ಸಹಿ ಮಾಡುವುದಕ್ಕೆ ಆಗುತ್ತದೆಯೆ? ಇವೆಲ್ಲಾ ಮೀನಿಂಗ್‌ಲೆಸ್ ಎಕ್ಸ್‌ಸೈಜ್‌ಗಳು, ಇವು ಜನಗಳಿಗೆ ಮೋಸ ಮಾಡತಕ್ಕಂಥ ಪ್ರಕ್ರಿಯೆಗಳು ಈ ವಿಷಯದಲ್ಲಿ ಸರ್ಕಾರದ ನಿಲುವು ಏನು ಎಂಬುದನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ನಮ್ಮನ್ನೆಲ್ಲಾ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ತಾವು ಬಯಸಿದಂತೆ ಕಾಣುತ್ತಿಲ್ಲ; ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದರೂ ಪರವಾಗಿಲ್ಲ. ಆದರೆ ಸರ್ಕಾರದ ನಿಲುವು ಏನು ಎನ್ನತಕ್ಕಂಥದ್ದು ನಮಗೆ ಗೊತ್ತಾಗಬೇಕು. 1991 ರಿಂದ ಈಚೆಗೆ ಈ ಅಥಾರಿಟಿ ಆದಮೇಲೆ ಎಷ್ಟು ಹೆಚ್ಚುವರಿ ನೀರನ್ನು ತಮಿಳುನಾಡು ರಾಜ್ಯ ಸಮುದ್ರಕ್ಕೆ ಬಿಟ್ಟಿದೆ ಎನ್ನತಕ್ಕಂಥದ್ದನ್ನು ಅವರ ಗಮನಕ್ಕೆ ತರಬೇಕಾಗಿತ್ತು. ಯಾವ ಕಾರಣಕ್ಕಾಗಿ ಈ ವಿಷಯವನ್ನು ಅವರ ಗಮನಕ್ಕೆ ತರಲಿಲ್ಲ ಎನ್ನತಕ್ಕಂಥಾದ್ದು ನನ್ನ ಪ್ರಶ್ನೆಯಾಗಿದೆ.

ಶ್ರೀ ಹೆಚ್.ಕೆ. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾಗಿರತಕ್ಕಂಥ ಸನ್ಮಾನ್ಯ ಸಿದ್ಧರಮರ ಕಳಕಳಿಯನ್ನು ನಾನು ಅರ್ಥೈಸಿಕೊಳ್ಳುತ್ತೇನೆ. ಆದರೆ, ನಾವು ನೀರು ಬಿಟ್ಟಿದ್ದೇವೆಂದು ಅವರು ಏನೊಂದು ಮಾತನ್ನು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅವರು ಆ ರೀತಿಯಲ್ಲಿ ಅಂತಹ ಪಡುವುದಕ್ಕೆ ಮತ್ತು ಅಭಿಪ್ರಾಯ ಪಡುವುದಕ್ಕೆ ಏನೂ ಕಾರಣ ಇಲ್ಲ. ನಮಗೆಯೇ ನೀರಿನ ಕೊರತೆ ಬಹಳಷ್ಟಿದೆ. ಇವತ್ತಿನದಿವಸ ಇನ್ನೂ ಮುಂಗಾರು ನಿರೀಕ್ಷಿತ ಸಂದರ್ಭದಲ್ಲಿ ಪ್ರಾರಂಭವಾಗದೇ ಇರುವುದರಿಂದ ನಾವೆಲ್ಲರೂ ಕೂಡ ತತ್ತರಿಸಿ ಹೋಗಿದ್ದೇವೆ. ಈ ಜಲಾಶಯದಲ್ಲಿ ಲೈವ್ ಕೆಪ್ಯಾಸಿಟಿ ಎಷ್ಟಿದೆ ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾರಂಗಿ ಜಲಾಶಯದಲ್ಲಿ 2.49 ಟಿಎಂಸಿ ಮತ್ತು ಹೇಮಾವತಿ ಜಲಾಶಯದಲ್ಲಿ 2.13 ಟಿಎಂಸಿ ಯಷ್ಟು ಲೈವ್ ಕೆಪ್ಯಾಸಿಟಿ ಇದೆ. ಹಾಗೆಯೇ, ಕೆಆರ್‌ಎಸ್ ಜಲಾಶಯದಲ್ಲಿ ಇನ್ನೂ ಆ ಮಿನಿಮಮ್ ಲೆವಲ್ ಥಾಟಿಯೇ ನೀರು ಬಂದಿಲ್ಲ. ಇನ್ನು ಕಬಿನಿ ಜಲಾಶಯದಲ್ಲಿ 6.59 ಟಿಎಂಸಿ ಲೈವ್ ಕೆಪ್ಯಾಸಿಟಿ ಇದೆ. ಎಲ್ಲಾ ಕೂಡಿದರೂ ಕೂಡ 11 ಟಿಎಂಸಿ ಲೈವ್ ಕೆಪ್ಯಾಸಿಟಿ ನೀರಿಲ್ಲ. ಇಷ್ಟು ಕಡಿಮೆ ಪ್ರಮಾಣದಲ್ಲಿ ಜಲಾಶಯದಲ್ಲಿ ನೀರು ಇರುವಾಗ ಅವರಿಗೆ ನೀರು ಬಿಡುವುದಕ್ಕೆ ನೀರು ಎಲ್ಲಿದೆ? ಯಾವುದೇ ಕಾರಣಕ್ಕೂ ನೀರು ಬಿಡುತ್ತೇವೆಂದು ಹೇಳತಕ್ಕಂಥಾದ್ದು ಏನಿದೆ ಅದು ಸರ್ವತಾ ಸರಿಯಲ್ಲ. ನೀರು ಬಿಡುವುದಕ್ಕೆ ನಮ್ಮಲ್ಲಿ ನೀರಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ನೀರು ಬಿಟ್ಟಿಲ್ಲ ಎನ್ನತಕ್ಕಂಥಾದ್ದನ್ನು ಇವರ ಹೇಳಿಕೆಯಿಂದ ನಂಬಬೇಕೆ? ಕನಕಪುರ ತಾಲ್ಲೂಕಿನಲ್ಲಿ ಸಂಗಮ ಬರುತ್ತದೆ. ಇವತ್ತಿನ ದಿವಸ ತಮಿಳುನಾಡಿಗೆ ಸಂಗಮದ ಮೂಲಕವೇ ನೀರು ಹರಿದು ಹೋಗುತ್ತದೆ. ತಾವು ಅಲ್ಲಿಗೆ ಬನ್ನಿ, ಅಲ್ಲಿ ಎಷ್ಟು ನೀರು ಹರಿದು ಹೋಗುತ್ತಿದೆ ಎನ್ನತಕ್ಕಂಥಾದ್ದನ್ನು ನೋಡೋಣ. ನೀರು ಬಿಡದೇ ಇದ್ದರೆ ಸಂಗಮದಲ್ಲಿ ನೀರು ಎಲ್ಲಿಂದ ಬರುತ್ತದೆ? ಕೆಆರ್ ಎಸ್ ಮತ್ತು ಹೇಮಾವತಿ ಹಾಗೂ ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಯ ಅಚ್ಚುಕಟ್ಟು ಪ್ರದೇಶದ ಸೀಪೇಜ್ ವಾಟರ್ ಹರಿದು ಹೋಗುತ್ತಿರಬಹುದೆಂದು ಅವರು ಹೇಳುತ್ತಿದ್ದಾರೆಂದು ಕಾಣುತ್ತದೆ. ಇವತ್ತಿನ ದಿವಸ ಸದರಿ ಪ್ರದೇಶದಲ್ಲಿರತಕ್ಕಂಥ ಬೆಳೆಗೆ ನೀರು ಇಲ್ಲದೇ ಇರುವುದರಿಂದ ಎಲ್ಲಾ ಬೆಳೆ ಒಣಗಿ ಹೋಗುತ್ತಿದೆ. ಹಾಗಾದರೆ, ಸೀಪೇಜ್ ವಾಟರ್ ಎಲ್ಲಿಂದ ಬರುತ್ತದೆ? ಆಟೋಮ್ಯಾಟಿಕ್ ಆಗಿ ಬರುವುದಕ್ಕೆ ಸಾಧ್ಯವಿದೆಯೆ ಅಥವಾ ಬಗೀರಥ ಬಂದು ನೀರು ಹರಿಸುವುದಕ್ಕೆ ಆಗುತ್ತದೆಯೆ?

ಶ್ರೀ ಡಿ.ಬಿ. ಚಂದ್ರೇಗೌಡ: ಸರ್ಕಾರದ ಅಧಿಕೃತ ವರದಿಯನ್ನು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಅಧಿಕೃತವಾದ ಮಾಹಿತಿಯನ್ನು ತಾವು ಹೇಳಿರಬಹುದು. ಆದರೆ, ಅಲ್ಲಿ ನೀರು ಎಲ್ಲಿಂದ ಬಂದು ಹರಿದು ಹೋಗುತ್ತಿದೆ?

ಶ್ರೀ ಡಿ.ಬಿ.ಚಂದ್ರೇಗೌಡ: ನದಿಯಿಂದ ನೀರು ಹರಿಯುತ್ತಿದೆ; ಎಲ್ಲಿಂದ ಹರಿಯುತ್ತದೆ ಎಂದು ಕೇಳಿದರೆ ನಾವು ಏನು ಹೇಳಬೇಕು? ಈಗಾಗಲೇ ನೀರು ಬಿಟ್ಟಿಲ್ಲ ಎಂದು ಮಾನ್ಯ ಸಚಿವರು ಪದೇ ಪದೇ ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್: ತಮಿಳುನಾಡು ರಾಜ್ಯದ ಮುಖ್ಯಮಂತ್ರಿಗಳಾಂಥ ಶ್ರೀಮತಿ ಜಯಲಲಿತರವರಿಗೆ, ನಮ್ಮ ವಾಸ್ತವಿಕ ಪರಿಸ್ಥಿತಿಯನ್ನು ವಿವರಿಸಿ ಹೇಳಿದರೂ ಸಹಿತ ಕೇಂದ್ರ ಸರ್ಕಾರದ ಮೇಲೆ ತಮ್ಮದೇ ಆಗಿರತಕ್ಕಂಥ ರೀತಿಯಲ್ಲಿ ಒತ್ತಡ ತಂದಿದ್ದಾರೆ. ಪ್ರಧಾನ ಮಂತ್ರಿಗಳು ನೀರು ಇದ್ದರೆ, ವಿಚಾರ ಮಾಡಿ ನೀರು ಬಿಡಿ ಮತ್ತು ದಯವಿಟ್ಟು ಅನುಕೂಲ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಬೇಕಾಗಿತ್ತು, ಅದನ್ನು ದೂರವಾಣಿ ಮೂಲಕ ತಿಳಿಸಿದ್ದಾರೆ. ಹಾಗೆಯೇ ಮಾನ್ಯ ಪ್ರಧಾನ ಮಂತ್ರಿಯವರ ಜೊತೆ ಸನ್ಮಾನ್ಯ ಮುಖ್ಯಮಂತ್ರಿಯವರೂ ಸಹ ಮಾತನಾಡಿದ್ದಾರೆ. ಇವತ್ತಿನ ವಾಸ್ತವ ಸ್ಥಿತಿಯನ್ನು ನೋಡಿದರೆ ನಾವೇ ದಿಗ್ಭ್ರಾಂತರಾಗತಕ್ಕಂತಹ ಸಂದರ್ಭ ಇರುವಾಗ ನೀರನ್ನು ಬಿಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಈಗ ನೀರು ಬಿಟ್ಟಿಲ್ಲವೆಂದು ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಹೋಗಿ ಮಧ್ಯಂತರ ಆದೇಶವನ್ನು ಜಾರಿಗೊಳಿಸಿ ನಮಗೆ ನೀರು ಬಿಡಿಸಬೇಕೆಂದು ಕೇಳಿಕೊಂಡಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ಏನು ನಿಲುವು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಸೂಕ್ಷ್ಮವಾಗಿ ತಾವು ಹೇಳಿದ್ದೀರಿ. ಅದರ ಬಗ್ಗೆ ನಾವೂ ಕೂಡ ಗಂಭೀರವಾಗಿ ಗಮನಹರಿಸುತ್ತೇವೆ. ತಮಗೆ ಗೊತ್ತಿರಬೇಕು; ಇದರಲ್ಲಿ ಹೊಸದೇನೂ ಇಲ್ಲ. ತಮಿಳುನಾಡು ಇವತ್ತಿನದಿವಸ ಸುಪ್ರೀಂ ಕೋರ್ಟಿಗೆ ಹೋಗಿರತಕ್ಕಂಥಾದ್ದು ನಿಜ. ಆದರೆ, ನಮ್ಮ ರಾಜ್ಯ ಸರ್ಕಾರದ ನಿಲುವು ಏನಿದೆ, ಆ ನಿಲುವಿನಲ್ಲಿ ಯಾವುದೇ ಕಾರಣಕ್ಕೂ ಬದಲಾವಣೆ ಆಗತಕ್ಕಂಥ ಪ್ರಶ್ನೆಯೇ ಇಲ್ಲ. ತಾಂತ್ರಿಕ ಮ್ಯಾನೇಜ್‌ಮೆಂಟ್‌ಗೆ ನಮ್ಮ ಈ ಡ್ಯಾಮ್‌ಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಡ್ಯಾಮ್‌ಗಳು ತಮಿಳುನಾಡಿನ ಸಲುವಾಗಿ ಬ್ಯಾಲೆನ್ಸಿಂಗ್ ರಿಸರ್ವಾಯರ್ಸ್ ಗಳು ಅಲ್ಲ. ಇವು ನಮ್ಮ ರಾಜ್ಯದ ರೈತರಿಗೆ ಅನುಕೂಲ ಮಾಡುವುದಕ್ಕೆ ಇರತಕ್ಕಂಥ ಜಲಾಶಯಗಳು. ಈ ಸಂದರ್ಭದಲ್ಲಿ ನಾವು ತಾಂತ್ರಿಕ ಮೇಲ್ವಿಚಾರಣೆ ಸಮಿತಿಯನ್ನು ಮಾಡಿ ಎಂದು ಅವರು ಅನಗತ್ಯವಾಗಿ ಸುಪ್ರೀಂ ಕೋರ್ಟಿಗೆ ಹೋಗಿರುವ ಹಿನ್ನೆಲೆಯಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, which can be the better forum in the country the committee which is header by no less person than the Prime Minister? Can there by any other forum than this? ಕಾವೇರಿ ಅಥಾರಿಟಿ ಉಪಯೋಗವಿಲ್ಲ ಅದು ಯಾವುದಕ್ಕೂ ಪ್ರಯೋಜನವಿಲ್ಲ ಅಂದರೆ ಹೇಗೆ? ಸನ್ಮಾನ್ಯ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿರತಕ್ಕಂಥ ಸಮಿತಿಯೇ ಯಾವುದಕ್ಕೂ ಉಪಯೋಗ ಇಲ್ಲ ಎನ್ನತಕ್ಕಂಥ ನಿಲುವನ್ನು ಅವರು ತೆಗೆದುಕೊಳ್ಳುವುದಾದರೆ

ಹೇಗೆ? ಯಾವ ಕಾರಣಕ್ಕೆ ತೆಗೆದುಕೊಳ್ಳಲಾಗಿದೆ ಎನ್ನತಕ್ಕಂಥ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಕರ್ನಾಟಕ ರಾಜ್ಯದ ರೈತರ ಹಿತದೃಷ್ಟಿಯಿಂದ ಏನೇನು ಹೆಜ್ಜೆಗಳನ್ನು ನಾವು ಇಡಬೇಕೋ ಆ ಎಲ್ಲಾ ಹೆಜ್ಜೆಯನ್ನು ನಾವು ಇಡುತ್ತೇವೆ. ತಾವು ಕೆಲವೊಂದು ಸಲಹೆಯನ್ನು ಕೊಟ್ಟಿದ್ದೀರಿ. ಅದಕ್ಕೆ ಸಂಬಂಧಪಟ್ಟಂತೆ ನಾವು ಗಮನಹರಿಸುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಇದು ಸ್ಪಷ್ಟವಾದ ಉತ್ತರ ಅಲ್ಲ. ಸುಪ್ರೀಂ ಕೋರ್ಟ್‌ಗೆ ಅವರು ಹೋಗಿ ದಾವೆ ಹೂಡಿದ್ದಾರೆ. ಅಲ್ಲಿ ಯಾವ್ಯಾವ ಪಾಯಿಂಟ್ಸ್‌ಗಳನ್ನು ರೈಜ್ ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ನಾನು ಕೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟಂಥ ಮಾಹಿತಿಯನ್ನು ಕಾನೂನು ಸಚಿವರು ಮತ್ತು ನೀವು ಫ್ಯಾಕ್ಸ್ ಮೂಲಕ ತರಿಸಿಕೊಂಡಿರುತ್ತೀರಿ. ಇದಕ್ಕೆ ಸಂಬಂಧಪಟ್ಟಂತೆ ನೀವು ಮತ್ತು ಮಾನ್ಯ ಮುಖ್ಯಮಂತ್ರಿಯವರು ಹಾಗೂ ಕಾನೂನು ಸಚಿವರು ಮಾತನಾಡಿರುತ್ತೀರಿ.

11. 30 ಎ.ಎಂ.

ನೀವು ಮಾತನಾಡಿ ಸಭೆ ಮಾಡಿರುತ್ತೀರಿ, ನೀವು ಏನು ನಿರ್ಣಯಗಳನ್ನು ತೆಗೆದುಕೊಂಡಿದ್ದೀರಿ? ನಮ್ಮನ್ನು ನೀವು ಕರೆದಿಲ್ಲ, ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ದೃಷ್ಟಿಕೋನ ನಿಮಗೆ ಈಗ ಇಲ್ಲ. What is the stand, i would like to know. ನೀವು ನೀರು ಬಿಟ್ಟಿಲ್ಲವೆಂದು ಹೇಳುತ್ತೀರಿ. ಅಲ್ಲಿ ನೀರು ಹರಿಯುತ್ತಿದೆ ಎಂದು ನಾನು ಹೇಳುತ್ತಿದ್ದೇನೆ. I repeat; i have seen in my own eyes. I believe in my eyes. ನಾನು ಇನ್ನೂ ಕುರುಡ ಆಗಿಲ್ಲ. ಅಲ್ಲಿ ನೀರು ಹರಿಯುತ್ತಿದೆ. ಆ ನೀರು ಎಲ್ಲಿಂದ ಬಂತು? ಆಯಿತು; ಅದನ್ನು ಬಿಟ್ಟು ಬಿಡೋಣ. What is the stand taken. ಆ ಸರ್ಕಾರದವರು ಸುಪ್ರೀಂಕೋರ್ಟಿಗೆ ಹೋಗಿದ್ದಾರೆ, ನಮ್ಮ ರಾಜ್ಯ ಸರ್ಕಾರದ ನಿಲುವು ಏನು?

ಶ್ರೀ ಹೆಚ್.ಕೆ. ಪಾಟೀಲ್: ಬೇಕಾದರೆ ನಾವು ನೀವು ಕೂಡಿಕೊಂಡು ಕೆಆರ್‌ಎಸ್ ಅಥವಾ ಕಬಿನಿಗೆ ಹೋಗೋಣ, ನಾನೂ ಬರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಹೇಳತಕ್ಕಂಥಾದ್ದು ಬಿಳಗುಂಬಲು ನೀರು ಹೋಗುತ್ತಿದೆಯಲ್ಲಾ ಸಂಗಮ ಅಲ್ಲಿ

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಿನ ಹಂಚಿಕೆ ಬಗ್ಗೆ, ವಿಧಾನಸೌಧ ಹೊರಗೆ ಮತ್ತು ಒಳಗೆ ಚರ್ಚೆಯಾಗಿದ್ದು 100 ವರ್ಷಗಳ ದಾಖಲೆಗಳು ನನ್ನ ಹತ್ತಿರ ಇವೆ. 1839 ರಿಂದ ಪ್ರಜಾಪ್ರತಿನಿಧಿಗಳ ಸಭೆಯಿಂದ ಹಿಡಿದು ಇವತ್ತಿನವರೆಗೂ ಚರ್ಚೆ ನಡೆಯುತ್ತಿದೆ. ಸಮಸ್ಯೆ ಮಾತ್ರ ಹಾಗೆ ಉಳಿದಿದೆ. ನಾನು ಇಷ್ಟು ಮಾತ್ರ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ತಮಿಳುನಾಡಿನ ರಾಜಕಾರಣಿಗಳು ತಮ್ಮ ರಾಜಕಾರಣ ಇಕ್ಕಟ್ಟಿಗೆ ಸಿಕ್ಕಾಗ ಅಲ್ಲಿಯ ಜನಗಳ ದಾರಿಯನ್ನು ತಪ್ಪಿಸುವುದಕ್ಕೆ ಈ ನೀರಿನ ರಾಜಕಾರಣವನ್ನು ಹುಟ್ಟುಹಾಕುತ್ತಾರೆ. ಅವರು ಸುಪ್ರೀಂಕೋರ್ಟಿಗೆ ಏನೂ ಕೇಳಿಲ್ಲ, ನಾನು ಅದನ್ನು ತರಿಸಿಕೊಂಡಿದ್ದೇನೆ. ಸುಪ್ರೀಂ ಕೋರ್ಟಿನಲ್ಲಿ ನ್ಯಾಯಮಂಡಳಿಯ ತೀರ್ಪಿನ ಬಗ್ಗೆ ಕರ್ನಾಟಕ ಸರಕಾರ ಪಾಲನೆ ಮಾಡುವ ತರಹ ಆದೇಶ

ಮಾಡಿ ಎಂದು ಹೋಗಿದ್ದಾರೆ. ಇದು ಮೊದಲನೆಯ ಸಾರಿ ಅಲ್ಲ, ಇದು ಕೊನೆಯ ಸಾರಿಯೂ ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಇಷ್ಟೇ ಇದ್ದರೆ ಸುಪ್ರೀಂ ಕೋರ್ಟಿನವರು ಅಡ್ಮಿಟ್ ಮಾಡುತ್ತಿರಲಿಲ್ಲಾ; ಹೊಸ ಪಾಯಿಂಟ್ ಇಲ್ಲದಿದ್ದರೆ ಸುಪ್ರೀಂಕೋರ್ಟಿನವರು ಕಿತ್ತು ಬಿಸಾಕುತ್ತಿದ್ದರು.

ಶ್ರೀ ವೈ.ಕೆ. ರಾಮಯ್ಯ: ಮಾನ್ಯ ಅಧ್ಯಕ್ಷರೆ, ಯಾರು ಬೇಕಾದರೂ ಸುಪ್ರೀಂ ಕೋರ್ಟಿನ ಮುಂದೆ ಹೋಗಿ ಅರ್ಜಿ ಸಲ್ಲಿಸಿದರೂ ಅದನ್ನು ಅವರು ಪರಿಶೀಲನೆ ಮಾಡುತ್ತಾರೆ. ಅದನ್ನು ಬಿಸಾಕುವುದು ಅಥವಾ ಬುಟ್ಟಿಗೆ ಹಾಕುವುದು ಅದರ ಬಗ್ಗೆ ತೀರ್ಮಾನ ಮಾಡುವುದು ಅದು ಎರಡನೆಯದು. If anybody goes and approach the Supreme Court, whether it has got jurisdiction and whether the application is maintainable; those are secondary. First of all, they have received. ನೀರಿನ ವಿಷಯದಲ್ಲಿ ರಾಜಕಾರಣ ಮಾಡುವುದು ಬೇಡ, ನಾನಂತೂ ರಾಜಕಾರಣ ಮಾಡುವುದಕ್ಕೆ ಸಿದ್ದನಿಲ್ಲ. ಅವರಿಗೂ ಗೊತ್ತಿದೆ, ನನಗೂ ಗೊತ್ತಿದೆ. ಅವರು ಹಾಗೂ ನಾನು ಇದರ ಬಗ್ಗೆ ಸಾಕಷ್ಟು ಮಾತನಾಡಿದ್ದೇವೆ. ಇದರಲ್ಲಿ ತಮಿಳುನಾಡಿನವರ ಉದ್ದೇಶ ಏನು ಎನ್ನುವುದು ನಮಗೆಲ್ಲರಿಗೂ ಸ್ಪಷ್ಟವಾಗಿ ಗೊತ್ತಿರುವಂಥ ವಿಷಯ; ಇಲ್ಲದಿರುವ ನೀರನ್ನು ನಾನು ಎಲ್ಲಿಂದ ಬಿಡುವುದಕ್ಕೆ ಆಗುತ್ತದೆ? ನೀರನ್ನು ಬಿಟ್ಟರೆ ನಾವು ಸುಮ್ಮನೆ ಇರುತ್ತೇವೆಯೇ? ಇವತ್ತು ತೆಂಗಿನ ಮರ ಹಾಗೂ ಗದ್ದೆಗಳು ಹಾಳಾಗುತ್ತಿವೆ, ಯಾವ ಸರ್ಕಾರವೇ ಇರಲಿ, ಸರ್ಕಾರಗಳಿಗೆ ಕಾನೂನನ್ನು ಗೌರವಿಸುವ ಒಂದು ಅನಿವಾರ್ಯತೆ ಇರಬಹುದು. ಇವತ್ತು ನಾನು ಹೇಳುತ್ತೇನೆ, ಈ ರಾಜ್ಯದ ಜನತೆಗೆ ನಿಮ್ಮ ಸುಪ್ರೀಂ ಕೋರ್ಟ್ ಅಲ್ಲ, ಯಾವ ಕೋರ್ಟಿನ ನ್ಯಾಯ ಮಂಡಲಿಯ ತೀರ್ಪನ್ನು ಸಹ ಆದರಿಸುವ ಹಾಗೂ ಗೌರವಿಸುವ ಅನಿವಾರ್ಯತೆ ಇಲ್ಲ, ನಮಗೆ ನೀರು ಇಲ್ಲದಿರುವ ನೀವು ಯಾರು ಅಫ್ಪಣೆ ಕೊಟ್ಟರೂ ನಾವು ನೀರನ್ನು ಬಿಡುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಅಧ್ಯಕ್ಷರೆ, ಸುಪ್ರೀಂಕೋರ್ಟಿನಲ್ಲಿ ಇವತ್ತು ಸಕ್ಷನ್ ನಡೆಯುತ್ತಿದೆ; ಕಾನೂನು ಮಂತ್ರಿಗಳಿಗೆ 60 ವರ್ಷವಾಗಿರುವುದಿಂದ ಸ್ವಲ್ಪ ಅವಳುಮರಳು ಆಗಿದೆ. ನಿಮಗೆ ಮೊದಲು ಹಾಗೆ ಇರಲಿಲ್ಲ, ನೀವು ಅಲ್ಲಿಗೆ ಹೋದನಂತರ ಏಕೋ ಕೊಟ್ಟು ಹೋಗಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ: ನೀವು ಸುಪ್ರೀಂ ಕೋರ್ಟಿನಲ್ಲಿ ಸೆಷನ್ ನಡೆಯುತ್ತಿದೆ ಎಂದು ಹೇಳಿದಿರಿ, ಅದಕ್ಕೆ ಅಲ್ಲಿ ನಡೆಯುವುದಿಲ್ಲವೆಂದು ನಾನು ಹೇಳಿದೆ. ನೀವು ಅರಳುಮರಳು ಎಂದರೆ ಹೇಗೆ? ನೀವು ಅದೇ ವಯಸ್ಸಿಗೆ ರೀಚ್ ಆಗುತ್ತೀರಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ಸೆಷನ್ ನಡೆಯುತ್ತಿದೆ, ತಮ್ಮ ನಿಲುವು ಏನು ಎನ್ನುವುದನ್ನು ಹೇಳುವುದಕ್ಕೆ ಮಾನ್ಯ ಮಂತ್ರಿಗಳಿಗೆ ಏನು ತೊಂದರೆ? ಕುಮಾರಿ ಜಯಲಲಿತಾರವರದ್ದು ಹುಟ್ಟು ಕರ್ನಾಟಕ, ಅಲ್ಲಿಯ ಚೀಫ್ ಮಿನಿಸ್ಟರ್ ಆಗಿರುವುದರಿಂದ ಇದರ ಮೇಲೆ ರಾಜಕೀಯ ಮಾಡುವುದೇ ಅವರ ಉದ್ದೇಶವಾಗಿರುತ್ತದೆ. ಮಾನ್ಯ ಕರುಣಾನಿಧಿಯವರು ಹಿಂದೆ ಮುಖ್ಯಮಂತ್ರಿಗಳು ಆಗಿದ್ದಾಗ ಇಷ್ಟೊಂದು ಸಮಸ್ಯೆ ಇರಲಿಲ್ಲ.

ಅಲ್ಲಿಯ ಜನರನ್ನು ಮೋಸ ಮಾಡಲಿಕ್ಕೆ ಅನಗತ್ಯವಾಗಿ ನಮ್ಮ ಕರ್ನಾಟಕದ ಮೇಲೆ ಅವರದೇ ಆದ ದೃಷ್ಟಿಯಲ್ಲಿ ಅವರು ರಾಜಕಾರಣ ಮಾಡುತ್ತಾರೆ, ಇದಕ್ಕೆ ಏನು ಉತ್ತರ ಕೊಡಬೇಕು ಎನ್ನುವುದರ ಬಗ್ಗೆ ಸುಪ್ರೀಂ ಕೋರ್ಟಿಗೆ ಹೇಳುವ ಕೆಲಸವನ್ನು ಮಾಡಬೇಕೆನ್ನುವುದು ನನ್ನ ಆಶಯವಾಗಿದೆ.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ. ಮಾನ್ಯ ಸಿಂಧ್ಯಾರವರು ಆತಂಕ ಪಡುವುದು ಬೇಡ, ನಾವು ಯಾವುದೇ ಕಾರಣಕ್ಕೆ ನೀರನ್ನು ಬಿಡುವ ಪರಿಸ್ಥಿತಿಯಲ್ಲಿಲ್ಲ. ನೀರು ಬಿಟ್ಟಿದ್ದೇವೆ ಎನ್ನುವ ಆತಂಕಕ್ಕೆ ತಾವು ಏನು ಬಂದಿದ್ದೀರಿ ಅದಕ್ಕೆ ಸಕಾರಣಗಳು ಇಲ್ಲ. ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಬೇಕೆಂದು ನಾನು ವಿನಂತಿ ಮಾಡಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ನೀವು ನೀರು ಬಿಟ್ಟಿಲ್ಲ, ಆದರೆ ಅದು ಹೇಗೆ ಹೋಗುತ್ತದೆ? ನೀವು ಇಬ್ಬರೂ ಕೂಡಿಕೊಂಡು ಸಂಗಮದ ಹತ್ತಿರ ಹೋಗಿ ಬನ್ನಿ. ಅದು ಏನು ದೊಡ್ಡ ತ್ರಾಸು? ಒಂದೂವರೆ ಗಂಟೆಯ ಜರ್ನಿ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಿಮಗೆ ನೀರು ನೋಡುವ ಅಭ್ಯಾಸವಿಲ್ಲ. ಮಳೆ ಬರುವುದಿಲ್ಲ, ನೀವು ನೀರು ನೋಡುವುದಿಲ್ಲ. ಹೇಮಾವತಿ, ಹಾರಂಗಿ, ಕಾವೇರಿ ನದಿ ಹರಿಯುತ್ತದೆಯೇ?

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ, ಕುಡುವನಹಳ್ಳಿ: ನಾವು ನೀರು ನೋಡಿಲ್ಲವೆಂದು ಹೇಳುತ್ತಾರೆ, ನಾವು ಬರೀ ಗಾಳಿಯನ್ನು ಕುಡಿಯುತ್ತೇವೆಯೇ?

ಶ್ರೀ ಸಿ. ಚನ್ನಿಗಪ್ಪ: ಇದು ಬಹಳ ಮಹತ್ವವಾದದ್ದು, ಇದಕ್ಕೆ ಗಾಂಭೀರ್ಯತೆಯನ್ನು ಕೊಡಬೇಕು. ರೈತರ ಪರವಾಗಿ ಈ ಸರ್ಕಾರ ಯಾವತ್ತೂ ಇಲ್ಲವೆಂದು ಹೇಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯವರು ನಿಂತಿರುವ ನೀರನ್ನು ನೋಡಿರುತ್ತೀರಿ, ಚಿಕ್ಕಮಗಳೂರಿನವರು ಎಲ್ಲಾ ನದಿಯಲ್ಲಿ ನೀರು ಹರಿಯುವುದನ್ನು ನೋಡುತ್ತಾರೆ. ಒಟ್ಟಾರೆಯಾಗಿ ನೀವು ನೀರನ್ನು ಬಿಡುವ ಪರಿಸ್ಥಿತಿಯಲ್ಲಿಲ್ಲ. ನಾವು ಪ್ರಾರ್ಥನೆಯನ್ನು ಮಾಡುತ್ತೇವೆ, ನಮ್ಮ ಹಾಗೂ ತಮಿಳುನಾಡಿನ ರೈತರಿಗೆ ಒಳ್ಳೆಯದಾಗಲಿ. ಭಗವಂತನು ಹೆಚ್ಚಿನ ಮಳೆಯನ್ನು ಕೊಡಲಿ, ಮಳೆಯ ಸಮಸ್ಯೆಯನ್ನು ಬಗೆಹರಿಸಲೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, it is a very important issue. If you don't take us into confidence now, ಇನ್ನು ಯಾವಾಗ ನೀವು ತೆಗೆದುಕೊಳ್ಳುವುದು? ಇದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಈಗತಾನೇ ಅವರು ಸುಪ್ರೀಂ ಕೋರ್ಟ್ ಮುಂದೆ ಅರ್ಜಿಯನ್ನು ಸಲ್ಲಿಸಿದ್ದಾರೆ, ಅದು ಇನ್ನು ಅಡ್ಮಿಷನ್ ಸ್ಟೇಜ್‌ನಲ್ಲಿದೆ. The

best of the best Advocates available in the country is Mr. Nariman. ಅವರಿಗೆ ಈ ಕೇಸ್‌ನ್ನು ನಡೆಸಿ ಎಂದು ನಾವು ಹೇಳಿದ್ದೇವೆ. Already the Advocate General is seized of the matter. ನಾವು ಏನೇನು ಹೇಳಬೇಕು ಅದನ್ನು ಹೇಳುವುದಕ್ಕೆ ಸಿದ್ಧರಾಗಿದ್ದೇವೆ. ಮಾನ್ಯ ಸಿಂಧ್ಯಾರವರು ಏನು ಸಲಹೆ ಮಾಡಿದರು, ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ, ಎಂದು ಹೇಳಿ; ನಮ್ಮ ನಿಲುವಿನಲ್ಲಿ ಯಾವ ಬದಲಾವಣೆಯೂ ಇಲ್ಲ, ಆದರೆ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕಾಗಿ ಈ ಒಂದು ವಾರದಲ್ಲಿ ಸಭೆಯನ್ನು ಕರೆಯಬೇಕೆಂದು ಹೇಳಿ ಮುಖ್ಯಮಂತ್ರಿಗಳ ಸಲಹೆ ಮಾಡಿದರು. ಈ ಒಂದು ಅಧಿವೇಶನ ಮುಗಿಯುವುದರೊಳಗಾಗಿ ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರುಗಳನ್ನು ಸಭೆಗೆ ಕರೆಯಬೇಕೆಂದು ಸಲಹೆ ಮಾಡಿದ್ದಾರೆ. ಸಮಯದ ಅಭಾವದಿಂದ ಕಾಲಕ್ಕೆ ಹೊಂದಿಕೊಂಡಿಲ್ಲ ಹೊರತು, ನಾವು ಸಭೆ ಕರೆಯುತ್ತೇವೆ; ಅವರು ಬಹಳ ಹಿಂದೆಯೇ ಸಲಹೆಯನ್ನು ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಆ ಸ್ಪೇಜ್ ಕೂಡ ಈಗ ಕ್ರಾಸ್ ಆಗಿದೆ. What does 'the Advocate General is seized of the matter" mean? Advocate General is to advise the Government on the legal matter. ಅಲ್ಟಿಮೇಟರಿ ಡಿಸಿಷನ್ ತೆಗೆದುಕೊಳ್ಳುವವರು ಸರ್ಕಾರದವರು. ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಕ್ಯಾಬಿನೆಟ್; ನಿಮ್ಮ ಡಿಸಿಷನ್ ಏನು? ಅಡ್ವೊಕೇಟ್ ಜನರಲ್ ಡೈರೆಕ್ಷನ್ ಏನು? ನಮ್ಮ ಪರವಾಗಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಾಡುತ್ತಿದ್ದಾರೆ, ತಮಿಳುನಾಡಿನವರು ಎತ್ತಿರತಕ್ಕಂಥ ಪಾಯಿಂಟ್ಸ್‌ಗಳ ಬಗ್ಗೆ ತಾವು ಏನು ಹೇಳಿದ್ದೀರೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ತಮ್ಮನ್ನು ಕರೆದು ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರಬೇಕು ಎನ್ನುವ ಒಂದು ಸದಿಚ್ಛೆಯಿಂದ ಮಾನ್ಯ ಮುಖ್ಯಮಂತ್ರಿಗಳು ಕಳೆದ 4-5 ದಿವಸಗಳ ಹಿಂದೆಯೇ ನಮಗೆ ಸಲಹೆಯನ್ನು ಮಾಡಿದರು, ಒಂದು ಮೀಟಿಂಗ್ ಕರೆಯೋಣ, ಮುಂದಿನ ವಾರದಲ್ಲಿ ಆ ಮೀಟಿಂಗ್‌ನ್ನು ಕರೆದು ಎಲ್ಲರ ಜೊತೆಯಲ್ಲಿಯೇ ನಿರ್ಣಯ ತೆಗೆದುಕೊಳ್ಳುತ್ತೇವೆಂದು ತಮಗೆ ಹೇಳುತ್ತಿದ್ದೇನೆ.

ಶ್ರೀ ವೈ. ಕೆ. ರಾಮಯ್ಯ: ಒಂದು ಮೀಟಿಂಗ್ ಕರೆದು ಚರ್ಚೆ ಮಾಡಬೇಕೆಂದು ನಾವೂ ಕೂಡ ಪ್ರಾರ್ಥನೆ ಮಾಡುತ್ತೇವೆ.

ಮಂಡ್ಯದಲ್ಲಿ ಎ.ಪಿ.ಎಂ.ಸಿ. ರೈತರಿಗೆ ವಾಪಸ್ಸು ನೀಡುವ ಬಗ್ಗೆ

59(427) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯ ಚಟುವಟಿಕೆಗಳಿಗಾಗಿ ಹಾಗೂ ಪ್ರಾಂಗಣದ ಅಭಿವೃದ್ಧಿ ಮತ್ತು ವಿಸ್ತರಣೆಗಾಗಿ ಅಕ್ಕಪಕ್ಕದ ಜಮೀನುಗಳನ್ನು ರೈತರಿಂದ ಕಂಡುಕೊಳ್ಳಲು ಮಾರುಕಟ್ಟೆ ಸಮಿತಿ ಮತ್ತು ರೈತರ ಒಡಂಬಡಿಕೆ ಆಗಿರುತ್ತದೆಯೇ?

ಆ) ಹಾಗಿದ್ದಲ್ಲಿ, ಇದರ ವಿವರಗಳೇನು ?